ದಿನಾಂಕಃ**23.09.2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಎನ್ ಎ ವಕೀಲರಿಂದಃ-

ನಾನು ಬಿ ಇ ಪದವಿಧರ. ಕಡೂರಿನ 2 ನೇ ಹೆ.ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದ ಓ ಎಸ್ 374/2013 ರ ದಾವೆ ನಡೆಯುವಾಗ ನಿಪಿ 27 ರಿಂದ 40 ರ ದಾಖಲೆಗಳು ನನ್ನ ಬಳಿ ಇರಲಿಲ್ಲ. ಸದರಿ ದಾವೆಯಲ್ಲಿ ಈ ಕೇಸಿನ ವಾದಿ/ ಆ ಕೇಸಿನ 1 ನೇ ಪ್ರತಿವಾದಿ ಪರವಾಗಿ ನಾನು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. 1 ನೇ ವಾದಿ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ.

ಈಗ ನೋಡುತ್ತಿರುವ ಹೇಳಿಕೆಯ ಪ್ರತಿಯು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ಪಾಟೀ ಸವಾಲಿನ ಪ್ರತಿಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ13 ಎಂದು ಗುರುತಿಸಲಾಯಿತು. ನಾನು ವಿದ್ಯಾವಂತನಾಗಿದ್ದು ಯಾವುದೇ ಕ್ರಯಪತ್ರವಾದ ನಂತರ ಖಾತೆ ಮಾಡಲು ಪುರಸಭೆಯವರು ಅಥವಾ ಆರ್ ಐ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ನಂತರ ಖಾತೆ ಮಂಜೂರು ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಈ ದಾವೆಯಲ್ಲಿ ಯಾವ ಯಾವ ದಾಖಲೆ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ.

ಪ್ರತಿವಾದ ಪತ್ರದ ಷೆಡ್ಯೂಲ್ ಸ್ವತ್ತು ಅಸೆಸ್ ಮೆಂಟ್ ನಂಬರ್ 2211 ಹಳೆಯ ಅಸೆಸ್ ಮೆಂಟ್ ಸಂ.5079 ಈಗಲೂ ಸಹಃ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದ ಪತ್ರದ ಷೆಡ್ಯೂಲ್ ಸ್ವತ್ತಿಗು ಮತ್ತು ಕ್ರಯಪತ್ರದ ಷೆಡ್ಯೂಲ್ ಸ್ವತ್ತಿಗು ತಾಳೆ ಇಲ್ಲ ಎಂದುಲ ಪುರಸಭೆಯವರು ತಿಳಿಸಿರುತ್ತಾರೆ. ಪ್ರತಿವಾದ ಪತ್ರದ ಷೆಡ್ಯೂಲ್ ಸ್ವತ್ತಿನ ಅಸೆಸ್ ಮೆಂಟ್ ಸಂಖ್ಯೆ ಯಾರ ಹೆಸರಿನಲ್ಲಿ ಇರಬೇಕಿತ್ತು ಎಂದರೆ ಸಾಕ್ಷಿಯು ಸದರಿ ಜಾಗ ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 27 ರಿಂದ 37 ರ ದಾಖಲೆಗಳನ್ನು ಓ ಎಸ್ ಸಂಖ್ಯೆ 374/2013 ರಲ್ಲಿ ಮತ್ತು ಅದರ ಮೇಲೆ ಸಲ್ಲಿಸಿದ ಮೇಲ್ಮನವಿ ಸಂಖ್ಯೆ 40/2016 ರಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ.

ನನ್ನ ಅಜ್ಜನ ಹೆಸರು ತಿಮ್ಮಯ್ಯ. ತಿಮ್ಮಯ್ಯನ ಅಪ್ಪನ ಹೆಸರು ಕುಲುಮೆ ರಂಗಪ್ಪ. ದಾವಾ ಆಸ್ತಿಯು ಕುಲುವೆ ರಂಗಪ್ಪ ಅಥವಾ ನನ್ನ ಅಜ್ಜ ತಿಮ್ಮಯ್ಯ ರವರ ಮಾಲೀಕತ್ವದಲ್ಲಿ ಇತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮುತ್ತಜ್ಜ ತಿಮ್ಮಯ್ಯ ರವರಿಗೆ ಆಸ್ತಿಯು ಸರ್ಕಾರದಿಂದ ಮಂಜೂರಾಗಿರುತ್ತದೆ. ನನ್ನ ಮುತ್ತಜ್ಜ ತಿಮ್ಮಯ್ಯ ರವರಿಗೆ ಮಂಜೂರಾದ ಬಗ್ಗೆ ನಾನು ಮಂಜೂರಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮುತ್ತಜ್ಜನಿಗೆ ಯಾವುದೇ ಆಸ್ತಿ ಮಂಜಾರಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿ ಕಬಳಿಸಲು ಈ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಆಸ್ತಿಯ ಮೇಲೆ ನನಗೆ ಯಾವುದೇ ರೀತಿ ಹಕ್ಕು, ಅಧಿಕಾರ ಮತ್ತು ಸ್ವಾಧೀನ ಇಲ್ಲ ಎಂದರೆ ಅವರ ಆಸ್ತಿ ಯಾವುದು ಎಂದು ನನಗೆ ಗೊತ್ತಿಲ್ಲ. ಅಸೆಸ್ ಮೆಂಟ್ ಸಂಖ್ಯೆ 1047/2150 ರ ಆಸ್ತಿಯು ನಮಗೆ ಸಂಬಂಧಪಟ್ಟಿದ್ದಾಗಿರುತ್ತದೆ. ನಿಪಿ 27 ರಿಂದ 40 ರ ದಾಖಲೆಗಳನ್ನು ನೋಡಿ ತಿಳಿದುಕೊಂಡು ನಂತರ ಹಾಜರುಪಡಿಸಿರುತ್ತೇನೆ.

ನಿಪಿ 30 ಮತ್ತು 39 ರಲ್ಲಿ ನಮೂದು ಮಾಡಿರುವ ಎರಡೂ ವಿಸ್ತೀರ್ಣವು ಸರಿಯಾಗಿಯೇ ಇರುತ್ತದೆ. ಪ್ರತಿವಾದಿಗಳಿಗೆ ಮಾಡಿರುವ ಖಾತೆ ರದ್ದುಪಡಿಸಿ ಎಂದು ನಾವು ಡಿ.ಸಿ.ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತೇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಹಾಜರುಪಡಿಸಲು ತೊಂದರೆ ಇಲ್ಲ.

ನಮ್ಮ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲದಿದ್ದರು ಪ್ರತಿವಾದಿಗಳ ಆಸ್ತಿಯು ನಮ್ಮದು ಎಂದು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ಮುತ್ತಜ್ಜನಿಗೆ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲ ಪ್ರತಿವಾದಿಗಳ ಆಸ್ತಿಯನ್ನೇ ದಾವಾ ಆಸ್ತಿ ಎಂದು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರು ಸಹಃ ಪ್ರತಿವಾದಿಗಳ ಆಸ್ತಿ ಲಪಟಾಯಿಸಲು ನಿಪಿ 1 ರಿಂದ 40 ರ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂಧಿ ತೋರಿಸಲು ಪುರಸಭೆಯವರು ನೀಡಿರುವ ಚೆಕ್ಕುಬಂಧಿ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಪುರಸಭೆಯವರ ಜೊತೆ ಷರಿಕ್ಕಾಗಿ

ಪ್ರತಿವಾಗಳ ಆಸ್ತಿಯ ಚೆಕ್ಕುಬಂಧಿಯನ್ನು ನಿಪಿ 39 ರಲ್ಲಿ ಬರೆಸಿಕೊಂಡು ತಂದಿರುತ್ತೇನೆ ಎಂದರೆ ಸರಿಯಲ್ಲ.

ಓ ಎಸ್ 374/2013 ರ ದಾವೆಯಲ್ಲಿ ನಾವು ದಾವಾ ಆಸ್ತಿಯ ಸ್ವಾಧೀನ ಮತ್ತು ಮಾಲೀಕತ್ವ ಹೊಂದಿಲ್ಲ ಎಂದು ತೀರ್ಪು ಆಗಿದೆ ಎಂದರೆ ಸರಿಯಲ್ಲ. ಓ ಎಸ್ 374/2013 ರ ದಾವೆಯ ತೀರ್ಪನ್ನು ನಾನು ಓದಿರುತ್ತೇನೆ. ವಾದಿಗಳು ದಾವಾ ಆಸ್ತಿಯ ಮಾಲೀಕರಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಇ-ಸ್ವತ್ತು ಈ ವರೆಗೂ ನನ್ನ ತಂದೆ, ಅಜ್ಜ, ಮುತ್ತಜ್ಜ ನ ಹೆಸರಿನಲ್ಲಿ ಆಗಿರುವುದಿಲ್ಲ ಮತ್ತು ಇರಲಿಲ್ಲ ಎಂದರೆ ಸರಿ. ಈ ವರೆಗೂ ದಾವಾ ಆಸ್ತಿಗೆ ಕಂದಾಯ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹಾಜರುಪಡಿಸಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.